ಇದು ರಾಜ್ಯ ಸರ್ಕಾರದ ಸಚಿವ ಸಂಪುಟದ ತೀರ್ಮಾನವೋ ಅಥವಾ ಅಧಿಕಾರಿಗಳ ತೀರ್ಮಾನವೋ ಎಂದು ಗೊತ್ತಿಲ್ಲ. ಇದರ ಬಗ್ಗೆ ಒಂದು ವಿವರಣೆಯನ್ನು ಕೊಡಬೇಕು. ಅಷ್ಟು ಮಾತ್ರವಲ್ಲ, 1988-89ರಲ್ಲಿ ಹಳೇ ರೇಷನ್ ಕಾರ್ಡ್ ಕೊಡಲ್ಪಟ್ಟಿತ್ತು. ಈಗ ಸುಮಾರು 8-9 ವರ್ಷಗಳ ನಂತರ ಕೇವಲ ಚಿಮಣಿಎಣ್ಣೆ ಕೂಪನ್ ಪಡೆಯುವುದಕ್ಕೋಸ್ಕರ ಮಾತ್ರ ಫೋಟೋವನ್ನು ಅಳವಡಿಸಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅದರ ಬದಲು ಹೊಸ ರೇಷನ್ ಕಾರ್ಡನ್ನಾದರೂ ಕೊಟ್ಟರೆ, ನೀವು ಯಾವ ರೀತಿ ಸ್ಕ್ರೂಟಿನೈಸ್ ಮಾಡಬೇಕು ಎಂದು ಇದ್ದೀರಿ, ಅದನ್ನು ಮಾಡಿದ ಹಾಗೆ ಆಗುತ್ತದೆ. ಅದೇ ರೀತಿ ಫೋಟೋದ ಉಪಯೋಗ ಕೂಡ ಆಗುತ್ತದೆ. 35-40 ರೂಪಾಯಿ ಖರ್ಚು ಮಾಡಿ ಫೋಟೋ ಅಳವಡಿಸಿ ಚಿಮಣಿಎಣ್ಣೆ ತೆಗೆದುಕೊಳ್ಳುವಂಥಾದ್ದು ಸಾಧುವಲ್ಲ. ಈ ನಿಟ್ಟಿನಲ್ಲಿ ತಾವು ಇದನ್ನು ಸ್ಪಷ್ಟವಾಗಿ ಹೊಸ ರೇಷನ್ ಕಾರ್ಡಿಗೆ ಎಂದು ಮಾಡಬೇಕು. ಮತ್ತು ಅದನ್ನು ಅಳವಡಿಸಲು ಕನಿಷ್ಟ 2-3 ತಿಂಗಳು ಆಗಬಹುದು. ಈಗ ಏನು ಸಮಸ್ಯೆ ಬಂದಿದೆ ಎಂದರೆ ಫೋಟೋ ಇಲ್ಲದಿದ್ದರೆ ಯಾವುದೇ ಪಡಿತರ ಅಂಗಡಿಯಿಂದ ಯಾವುದೇ ಪಡಿತರ ಸಾಮಗ್ರಿಗಳನ್ನು ಕೊಡುತ್ತಿಲ್ಲ. ಇದರಿಂದ ಒಟ್ಟಾರೆ ಒಂದು ರೀತಿಯ ಕನ್‌ಫ್ಯೂಷನ್ ನಮ್ಮ ಕ್ಷೇತ್ರದಲ್ಲಿ ಉಂಟಾಗಿದೆ. ಇದರ ಬಗ್ಗೆ ತಾವು ಸ್ಪಷ್ಟವಾದ ಆದೇಶವನ್ನು ಕೊಡಬೇಕು ಮತ್ತು ಹೊಸ ರೇಷನ್ ಕಾರ್ಡುಗಳಿಗೆ ಅನುಮತಿ ಕೊಡಬೇಕು ಎನ್ನುವಂಥ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಬಸವೆಣ್ಣೆಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಸೀಮೆಎಣ್ಣೆ ವಿತರಣೆಯಲ್ಲಿ ಬಹಳ ಲೋಪದೋಷಗಳಿದ್ದವು. ಅರ್ಹ ಕಾರ್ಡುದಾರರಿಗೆ ಸೀಮೆಎಣ್ಣೆ ಸಿಗುತ್ತಿರಲಿಲ್ಲ. ಸೀಮೆಎಣ್ಣೆ ಕಾಳಸಂತೆಯಲ್ಲಿ ಹೋಗುತ್ತಿತ್ತು. ಇದನ್ನು ಸರಿಪಡಿಸುವುದಕ್ಕೋಸ್ಕರ ಕೂಪನ್ ಪದ್ಧತಿಯನ್ನು 1996-97ರಿಂದ ಜಾರಿಗೆ ತಂದಿದ್ದೇವೆ. ಕೂಪನ್ ಪದ್ಧತಿ ಜಾರಿಗೆ ಬಂದ ಮೇಲೆ ಕಾರ್ಡುದಾರರಿಗೆ ಸಿಗಬೇಕಾದ ಪ್ರಮಾಣದಲ್ಲಿ ಸೀಮೆಎಣ್ಣೆ ಸಿಗುತ್ತಿದೆ. ಅದು ಕಾಳಸಂತೆಗೆ ಹೋಗುತ್ತಿಲ್ಲ. ಇದನ್ನು ಸಾರ್ವಜನಿಕರೆಲ್ಲರೂ ಸ್ವಾಗತ ಮಾಡಿದ್ದಾರೆ. ಕೂಪನ್ ಪದ್ಧತಿಯನ್ನು ಜಾರಿಗೆ ತಂದುದರಿಂದ ಕೆಲವು ಬೋಗಸ್ ಕಾರ್ಡುಗಳು ಎಲಿಮಿನೇಟ್ ಆಗಿವೆ. ಇದನ್ನು ಪ್ರತಿಭಟನೆ ಮಾಡುವವರು ನ್ಯಾಯಬೆಲೆ ಅಂಗಡಿಗಳವರೇ ಹೊರತು ಸಾರ್ವಜನಿಕರಲ್ಲ. ಸಾರ್ವಜನಿಕರು ಈ ಕಾರ್ಯಕ್ರಮವನ್ನು ಒಪ್ಪಿದ್ದಾರೆ, ಸ್ವಾಗತಿಸಿದ್ದಾರೆ. ಇರುವಂಥ ಹಳೇ ಕಾರ್ಡುಗಳನ್ನು ರೀಪ್ಲೇಸ್ ಮಾಡಿ ಹೊಸ ಕಾರ್ಡುಗಳನ್ನು ಕೊಡಿ ಎಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. 8-9 ವರ್ಷಗಳ ಹಿಂದೆ ಕೊಟ್ಟಂಥ ಕಾರ್ಡುಗಳು ಅವು. ಅವನ್ನು ಆದಷ್ಟು ಜಾಗ್ರತೆ ರೀಪ್ಲೇಸ್ ಮಾಡಿ ಹೊಸ ಕಾರ್ಡುಗಳನ್ನು ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

**ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬಂದಂಥ ಮಹಿಳೆಯೊಬ್ಬರು ಸಾವನ್ನಪ್ಪಿರುವ ಬಗ್ಗೆ.**

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ನಾನು ನಮ್ಮ ಕ್ಷೇತ್ರವಾದ ತೀರ್ಥಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬಂದಂಥ ಮಹಿಳೆಯೊಬ್ಬರು

ಅಲ್ಲಿರತಕ್ಕಂಥ ಸಿಬ್ಬಂದಿ ವರ್ಗದವರ ದುಷ್ಕೃತ್ಯದಿಂದಾಗಿ ಸಾವನ್ನಪ್ಪುವ ಹಾಗೆ ಮಾಡಿರತಕ್ಕಂಥ ವಿಚಾರವನ್ನು ಈ ಸದನದ ಹಾಗೂ ಸರ್ಕಾರದ ಗಮನಕ್ಕೆ ತಂದಿದ್ದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದರು. ವಿಚಾರಣೆ ಮಾಡಿದ್ದಾರೆ. ಆದರೆ ಇನ್ನೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಅಲ್ಲಿನ ಜಿಲ್ಲಾ ಪರಿಷತ್ತಿನವರು ಆ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಂಥ ನೆಲ ಒರೆಸುವ ಇಬ್ಬರು ಆಯಾಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಅವರ ವ್ಯಾಪ್ತಿಯಲ್ಲಿ ಬರುವಂತೆ ಇವರನ್ನು ಸಸ್ಪೆಂಡ್ ಮಾಡಲು ಮಾತ್ರ ಅವರಿಗೆ ಅಧಿಕಾರ ಇರುವುದೆಂದು ಆ ರೀತಿ ಮಾಡಿದ್ದಾರೆ. ತನಿಖೆಯ ವರದಿ ಇಲ್ಲಿಗೆ ಬಂದಿದೆ. ಮಂತ್ರಿಗಳನ್ನು ಕೇಳಿದಾಗ ಅವರು, ಇನ್ನೂ ಮೂರು ಜನರನ್ನು ಸಸ್ಪೆಂಡ್ ಮಾಡಿದ್ದೇನೆ ಎಂದು ಹೇಳಿದರು. ಇದುವರೆಗೂ ಆ ಆದೇಶ ತೀರ್ಥಹಳ್ಳಿಗೆ ಹೋಗಿಲ್ಲ. ಹಾಗೂ ಯಾರೂ ಕೂಡ ಸಸ್ಪೆಂಡ್ ಆಗಿಲ್ಲ. ಮಹಿಳಾ ವೈದ್ಯಾಧಿಕಾರಿಗಳೂ ಸಸ್ಪೆಂಡ್ ಆಗಿಲ್ಲ ಹಾಗೂ ಅಲ್ಲಿರತಕ್ಕಂಥ ಎ.ಎನ್.ಎಂ.ಗಳೂ ಕೂಡ ಆಗಿಲ್ಲ. ದುರ್ದೈವವೆಂದರೆ ಮೊನ್ನೆಯ ದಿನ ಕೆಲವರು ಒಂದು ಮೆರವಣಿಗೆಯನ್ನು ಮಾಡಿ, ಇಬ್ಬರು ದಲಿತ ನೌಕರರ ಮೇಲೆ ಕ್ರಮವಾಗಿದೆ, ಶಾಸಕರು ಮತ್ತು ಸರ್ಕಾರ ದಲಿತ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದಾರೆ ಎಂದು ನನ್ನನ್ನು ಮತ್ತು ನಿಮ್ಮನ್ನು ಸೇರಿಸಿ ಹರಾಜು ಹಾಕಿದ್ದಾರೆ. ಯಾರ ಪ್ರಭಾವದಿಂದಾಗಿ ಈ ಕಡತ ಇನ್ನೂ ಇಲ್ಲೇ ಇದೆ, ಅವರ ಮೇಲೆ ಏಕೆ ಸೂಕ್ತ ಕ್ರಮ ಜರುಗಿಸಲು ಆಗಲಿಲ್ಲ? ನೆಲ ಒರೆಸುವವರನ್ನು ಸಸ್ಪೆಂಡ್ ಮಾಡಿದ್ದಾರೆ. ನೆಲ ಒರೆಸುವವರು ಹೆರಿಗೆ ಮಾಡಿಸುವ ಕೆಲಸವನ್ನು ಮಾಡಿ ಯಾರನ್ನಾದರೂ ಕೊಂದಿದ್ದಾರೆ ಎನ್ನತಕ್ಕಂಥಾದ್ದನ್ನು ತಾವು ಒಪ್ಪಿಕೊಳ್ಳುತ್ತೀರಾ ಎನ್ನುವಂಥಾದ್ದನ್ನು ದಯಮಾಡಿ ತಿಳಿಸಬೇಕು. ಇದು ನನ್ನ ಕ್ಷೇತ್ರದ ಸಾರ್ವಜನಿಕ ಮಹತ್ವದ ಸಂಗತಿ. ಇವತ್ತು ಜನ ಭರವಸೆ ಇಟ್ಟು ಸರ್ಕಾರಿ ಆಸ್ಪತ್ರೆಗೆ ಬರುವಂಥ ಪರಿಸ್ಥಿತಿ ಅಲ್ಲಿ ಇಲ್ಲ. ಅಲ್ಲಿರತಕ್ಕಂಥ ಅಯೋಗ್ಯ ಸಿಬ್ಬಂದಿಯನ್ನು ತತ್‌ಕ್ಷಣ ಬದಲಾವಣೆ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ನಾನು ತಿಳಿಯಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಿತ್ರರು ಹೇಳಿದ ಹಾಗೆ ಈಗಾಗಲೇ ವಿಚಾರಣೆಯಾಗಿದೆ. ವರದಿ ಸರ್ಕಾರಕ್ಕೆ ಬಂದಿದೆ ಎಂದು ಅವರೇ ತಿಳಿಸಿದ್ದಾರೆ. ಮಂತ್ರಿಗಳನ್ನು ಕೇಳಿದಾಗ ಇನ್ನೂ ಮೂರು ಜನರನ್ನು ಅಮಾನತ್ತಿನಲ್ಲಿಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆದ್ದರಿಂದ ನಾಳೆ ಮಂತ್ರಿಗಳು ಈ ಸದನಕ್ಕೆ ಬಂದಾಗ ಅವರೇ ಇದಕ್ಕೆ ಉತ್ತರ ಕೊಡುವಂಥ ಏರ್ಪಾಡು ಮಾಡುತ್ತೇನೆ.

**ಹುಬ್ಬಳ್ಳಿಯ ಮೌಲಾನಾ ಆಜಾದ್ ಹೋಮಿಯೋಪತಿ ಮೆಡಿಕಲ್ ಕಾಲೇಜಿನ ಆಡಳಿತ ಮಂಡಳಿಯು ಅಲ್ಲಿನ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ನಡೆಸುತ್ತಿರುವುದು.**

ಶ್ರೀ ಜಗದೀಶ್ ಶೆಟ್ಟರ್ ( ಹುಬ್ಬಳ್ಳಿ ಗ್ರಾ) : ಸನ್ಮಾನ್ಯ ಉಪಾಧ್ಯಕ್ಷರೇ, ಹುಬ್ಬಳ್ಳಿ ಮಹಾನಗರದಲ್ಲಿ ಮೌಲಾನಾ ಆಜಾದ್ ಹೋಮಿಯೋಪತಿ ಮೆಡಿಕಲ್ ಕಾಲೇಜಿನಲ್ಲಿ ಆಡಳಿತ ಮಂಡಳಿಯು ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ನಡೆಸಿರುವ ದೌರ್ಜನ್ಯ ಮತ್ತು ಲೈಂಗಿಕ ಹಿಂಸೆಯ ಬಗ್ಗೆ ಕಳೆದ ಅಧಿವೇಶನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಆ ಸಂದರ್ಭದಲ್ಲಿ ಮಾನ್ಯ ಸಚಿವರು, ವರದಿಯನ್ನು